ಕಾಸರಗೋಡಿನವರಾದ ಜಯಶ್ರೀ ಬಿ. ಕದ್ರಿ ಅವರು ಪದವಿವರೆಗಿನ ಶಿಕ್ಷಣವನ್ನು ಕಾಸರಗೋಡಿನಲ್ಲಿ ಮುಗಿಸಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಇಂಗ್ಲಿಷ್ ಎಂ.ಎ. ಓದಿದರು. ಇತ್ತೀಚೆಗಷ್ಟೇ ಪಿಎಚ್.ಡಿ ಪದವಿ ಪಡೆದಿರುವ ಅವರು ಕನ್ನಡ, ತುಳು, ಮಲಯಾಳಂ ಭಾಷೆ ಬಲ್ಲವರು. ಪ್ರಸ್ತುತ ತುಮಕೂರಿನ ಹುಳಿಯಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂಗ್ಲಭಾಷಾ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ತೆರೆದಂತೆ ಹಾದಿ' (ವೈಚಾರಿಕ ಲೇಖನಗಳು), 'ಬೆಳಕು ಬಳ್ಳಿ' (ಲಲಿತ ಪ್ರಬಂಧ) 'ಕೇಳಿಸದ ಸದ್ದುಗಳು' (ಕವನ ಸಂಕಲನ)ಇವರ ಪ್ರಕಟಿತ ಕೃತಿಗಳು.

ಊರಿಡೀ ಹೇಳಿಕೊಂಡು ಬರುತ್ತಾರೆ. ಶಾಸ್ತ್ರಗಳನ್ನು ತಮಗೆ ಬೇಕಾದಂತೆ ತಿರುಚುವ ವೈದಿಕಶಾಹಿಯ ಪ್ರತೀಕವಾಗಿದೆ ಈ ಘಟನೆ.

ತನ್ನ ಸವತಿಗೆ ಹುಟ್ಟುವ ಗಂಡು ಮಗು ಲಚ್ಚನಿಗೆ ಅಕ್ಕರೆ ತೋರುವ, ಗಂಡನ ಅವಜ್ಞೆ, ಅನಾದರಗಳನ್ನು ಸಹಿಸಿಕೊಳ್ಳುವ ಈ ಪಾರೋತಿಯ ಪಾತ್ರ ನನ್ನನ್ನು ರಾಮಾಯಣದ ಊರ್ಮಿಳೆಯ ಪಾತ್ರದಂತೆಯೇ ಕಾಡುತ್ತದೆ. ವಯಸ್ಸಿಗೆ ಮುಂಚೆ ಮುದುಕಿಯಾಗಿ ಸಾಯುವ ಪಾರೋತಿಯ ಸಾವಿನ ಗಳಿಗೆಯಲ್ಲಿ ಐತಾಳರು ಅವಳೊಂದಿಗೆ ತಾವಾಡಿದ ಕಟು ಮಾತುಗಳನ್ನು ನೆನೆದು ಮರುಗುತ್ತಾರೆ.

ಕ್ಷಮಾಮಯಿಯಾದ ಆಕೆ ತನ್ನ ಕೊನೆ ಗಳಿಗೆಯಲ್ಲಿ, 'ಅವರು ನನ್ನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡಾರೆಯೇ?' ಎಂದು ಕೇಳುವ ಕ್ಷಣದಲ್ಲಿ ಐತಾಳರ ಜಪತಪ ಮಾಡುವ ಬಾಯಿ ನಡುಗುತ್ತದೆ. ತಾನೆಸಗಿದ ಪ್ರಮಾದ ಬಹುಶಃ ಅವರಿಗೆ ಅರಿವಾಗುತ್ತದೆ. ಒಂದು ರೀತಿಯ ಕಾವ್ಯ ನ್ಯಾಯದಂತೆ ಅವರು ತಮ್ಮ ಮಗನಿಂದಲೇ ದುರಂತ ಕಾಣುತ್ತಾರೆ, ನೋವಿನಿಂದ ಬೇಗ ಸಾಯುತ್ತಾರೆ.

ಪಾರೋತಿಗೆ ಹೋಲಿಸಿದರೆ ಕಾದಂಬರಿಯಲ್ಲಿ ಬರುವ ಸರಸೋತಿ, ನಾಗವೇಣಿ ಅವರದ್ದು ತುಸು ಗಟ್ಟಿ ಪಾತ್ರಗಳು. ಅವರು ನಂಬಿ ಮೋಸ ಹೋಗುವುದು, ವಿಧಿಯ ಆಟಕ್ಕೆ ಮರುಗುವುದು ಇವುಗಳ ಹೊರತಾಗಿಯೂ ಅವರು ತಮ್ಮ ಬಾಳಿನಲ್ಲಿ ನಂಬಿಕೆ ಕಳೆದುಕೊಳ್ಳುವುದಿಲ್ಲ. ಇನ್ನು ಲಚ್ಚನಂತಹ ಗಂಡ, ನಿರಂತರ ಕಷ್ಟಗಳಿಂದ ಹತಾಶಳಾಗುವ ನಾಗವೇಣಿ ಒಮ್ಮೆ ಆತ್ಮಹತ್ಯೆಗೆ ಯತ್ನಿಸಿದರೂ ತದನಂತರ 'ತನ್ನ ನರಗಳನ್ನು ತಿಕ್ಕಿ ತೇದಿಯಾದರೂ ಬಾಳ್ವೆ ಮಾಡಬೇಕು' ಎಂಬ ಕೆಚ್ಚಿನಿಂದ ಬಾಳುತ್ತಾಳೆ.

ಎಲ್ಲರನ್ನೂ ಎಲ್ಲವನ್ನೂ ಕಳೆದುಕೊಂಡ ನಂತರವೂ ಬದುಕುವ ಈ ಹೆಣ್ಣು ಮಕ್ಕಳ ಛಲ, ಆಧ್ಯಾತ್ಮಿಕತೆಯ ಸೋಗಿಲ್ಲದ ಅಪ್ಪಟ ಜೀವನ ಪ್ರೀತಿ ನಮಗೆ ಮಾದರಿ. ಅವರನ್ನು ಪೊರೆಯುವ ಶಕ್ತಿ ಯಾವುದು? ಪಾರೋತಿ, ಸರಸೋತಿ, ನಾಗವೇಣಿ ಮೂರು ಪಾತ್ರಗಳು ಕೂಡ ಸಂಸಾರ, ಗಂಡಿನ ಪ್ರೀತಿಯಿಂದ ವಂಚಿತರು. ಭವಿಷ್ಯದ ಬಗ್ಗೆ ಯಾವ ಹಿಡಿತ ಇಲ್ಲದಿದ್ದರೂ ಶ್ರಮಕ್ಕೆ ತನ್ನ ಜೀವವನ್ನೇ ತೆತ್ತುಕೊಂಡು, ತಮ್ಮೆಲ್ಲ ಸೃಜನಶೀಲ ಸಾಧ್ಯತೆಗಳ ಬಗ್ಗೆ ಕನಸು ಕೂಡ ಕಾಣದೆ ಬದುಕಿದ ತಲೆಮಾರನ್ನು ಇವರು ಪ್ರತಿನಿಧಿಸುತ್ತಾರೆ. ಹಾಗಿದ್ದರೂ ಅವರ ಪೊರೆಯುವ ಚೈತನ್ಯ, ಸೃಷ್ಟಿಶೀಲತೆ ದೊಡ್ಡದು. ಹಸು ಸಾಕಿ ಹಾಲು ಕರೆಯುವ, ಹೊಲದಲ್ಲಿ ಕಾಳು ಬೆಳೆಯುವ, ನಿಸರ್ಗಕ್ಕೆ ಸಮೀಪವಾಗಿ ಬೆಳೆಯುವ ಈ ಹೆಣ್ಣು ಮಕ್ಕಳ ಅಂತಃಕರಣ ದೊಡ್ಡದು. ವಿದ್ಯಾಭ್ಯಾಸ, ಅನುಕೂಲತೆ ಇದ್ದ ಕಾರಣ ಇವರಲ್ಲಿ ನಾಗವೇಣಿ ಪಿಯಾನೋ ಕಲಿತು ತನ್ನ ಭಾವನೆಗಳಿಗೆ ಅಭಿವ್ಯಕ್ತಿ ನೀಡುತ್ತಾಳೆ. ರಾಮೈತಾಳರ ಮೊಮ್ಮಗ, ಲಚ್ಚನ ಮಗ ರಾಮ ಆದರ್ಶವಾದಿಯಾಗಿದ್ದು ತನ್ನ ತಾಯಿ ಸೇರಿದಂತೆ ಎಲ್ಲ ಹೆಣ್ಣು ಜೀವಗಳನ್ನು ಸಮಾನತೆ, ಪ್ರೀತಿಯಿಂದ ಕಾಣುವುದು ಕಾದಂಬರಿಯ ಕೊನೆಯ ಘಟ್ಟದಲ್ಲಿನ ತಿರುವು.

ಆದರೂ ಕಾದಂಬರಿಯ ಓದು ಮುಗಿದ ಮೇಲೆ ನನ್ನ ಕಣ್ಣ ಮುಂದೆ ಬರುವುದು ಗಂಡನ ಮದುವೆಗೆ ಉಪ್ಪಿನಕಾಯಿ ಹಾಕುತ್ತಿರುವ ಪಾರೋತಿಯ ಚಿತ್ರ.

●